**ಕರ್ನಾಟಕ ಸರ್ಕಾರ**

**ಸಮಗ್ರ ಮಕ್ಕಳ ರಕ್ಷಣಾ ಯೋಜನೆ**

ಸಂ.ಕೆಎಸ್‌ಐಸಿಪಿಎಸ್/ಕೋವಿಡ್-19/53/2020-21

ನಿರ್ದೇಶನಾಲಯ
ಸಮಗ್ರ ಮಕ್ಕಳ ರಕ್ಷಣಾ ಯೋಜನೆ,
ಬೆಂಗಳೂರು, ದಿನಾಂಕ:25.04.2020

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು
ಜಿಲ್ಲಾ ಮಕ್ಕಳ ರಕ್ಷಣಾ ಘಟಕ,
30 ಜಿಲ್ಲೆಗಳು.

ಮಾನ್ಯರೇ,

ವಿಷಯ: ಕೋವಿಡ್-19ರ ಹಿನ್ನೆಲೆಯಲ್ಲಿ ಹೊಸದಾಗಿ ರೆಸ್ಕ್ಯೂ ಮಾಡಲಾದ ಪಾಲನೆ ಮತ್ತು ರಕ್ಷಣೆ ಅವಶ್ಯಕತೆ ಇರುವ ಮಕ್ಕಳಿಗೆ ಸೂಕ್ತ ವ್ಯವಸ್ಥೆ ಕಲ್ಪಿಸುವ ಬಗ್ಗೆ.

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಲಾಕ್‌ಡೌನ್‌ಗೆ ಸಂಬಂಧವಿಲ್ಲದೆ ಎಂದಿನಂತೆ ಸಂಕಟ ಸ್ಥಿತಿಯಲ್ಲಿರುವ ಮತ್ತು ಯಾವುದಾದರೂ ಸಮಸ್ಯೆಯಲ್ಲಿರುವ ಮಕ್ಕಳನ್ನು ಬಾಲನ್ಯಾಯ (ಪಾಲನೆ ಮತ್ತು ರಕ್ಷಣೆ) ಕಾಯ್ದೆ 2015 ರನ್ವಯ ಎಂದಿನಂತೆ ರೆಸ್ಕ್ಯೂ ಮತ್ತು ರೀಹ್ಯಾಬಿಲಿಟೇಷನ್ ಮಾಡಲಾಗುತ್ತಿದೆ. ಈ ಮಕ್ಕಳಿಗೆ ಪಾಲನೆ ಮತ್ತು ರಕ್ಷಣೆ ಒದಗಿಸಬೇಕಾಗುತ್ತದೆ.

ಆದರೆ ಈಗಾಗಲೇ ಮಕ್ಕಳ ಪಾಲನಾ ಸಂಸ್ಥೆಯಲ್ಲಿರುವಂತಹ ಮಕ್ಕಳು ಕೋವಿಡ್ ದೃಷ್ಟಿಯಲ್ಲಿ ಒಂದು ರೀತಿಯ ಸುರಕ್ಷಿತ ವಾತಾವರಣದಲ್ಲಿದ್ದು, ಈ ಮಕ್ಕಳೊಂದಿಗೆ ಹೊಸದಾಗಿ ರೆಸ್ಕ್ಯೂ ಮಾಡಲಾದ ಮಕ್ಕಳನ್ನು ಒಟ್ಟುಗೂಡಿಸುವುದು ಮಕ್ಕಳ ಪಾಲನಾ ಸಂಸ್ಥೆಯಲ್ಲಿರುವ ಮಕ್ಕಳ ಹಿತದೃಷ್ಟಿಯಿಂದ ಸೂಕ್ತವಾಗಿರುವುದಿಲ್ಲ.

ಮೇಲಿನ 2 ಅವಶ್ಯಕಗಳನ್ನು ಪೂರೈಸಬೇಕಾದರೆ ಹೊಸದಾಗಿ ರೆಸ್ಕ್ಯೂ ಮಾಡಲಾದ, ಹೊಸದಾಗಿ ದಾಖಲಾಗುವ ಮಕ್ಕಳನ್ನು ಈಗಾಗಲೇ ಮಕ್ಕಳ ಪಾಲನಾ ಸಂಸ್ಥೆಯಲ್ಲಿರುವ ಮಕ್ಕಳ ಜೊತೆ ಇಡದೆ ಬೇರೆಡೆ ಅವರಿಗೆ ವಾಸ್ತವ್ಯದ ವ್ಯವಸ್ಥೆ ಕಲ್ಪಿಸಬೇಕಾಗುತ್ತದೆ.

ಪ್ರಸ್ತುತ ಈ ಅವಶ್ಯಕತೆಗಳನ್ನು ಪೂರೈಸಲು ಮಕ್ಕಳ ಪಾಲನಾ ಸಂಸ್ಥೆಯಲ್ಲಿಯೇ ಇರುವ ಒಂದು ಕೊಠಡಿಯನ್ನು ಕ್ವಾರಂಟೈನ್ ಸೌಲಭ್ಯಕ್ಕಾಗಿ ಕಾಯ್ದಿರಿಸಿ ಹೊಸದಾಗಿ ದಾಖಲಾಗುವ ಮಕ್ಕಳನ್ನು ಸದರಿ ಕೊಠಡಿಯಲ್ಲಿರಿಸಲು ವ್ಯವಸ್ಥೆ ಕಲ್ಪಿಸಲಾಗುತ್ತಿದೆ. ಆದರೆ ಕ್ವಾರಂಟೈನ್‌ನಲ್ಲಿರಬೇಕಾದ ಮಕ್ಕಳು ಈ ಕೆಳಕಂಡ ಸಮಸ್ಯೆಗಳನ್ನು ಎದುರಿಸಬೇಕಾಗುತ್ತವೆ.

1) ಕ್ವಾರಂಟೈನ್‌ಗೆ ಒಳಪಡಿಸಿದ ಮಗು 2 ವಾರಗಳ ಕಾಲ ಒಬ್ಬಂಟಿಯಾಗಿ ಕೊಠಡಿಯಲ್ಲಿರಬೇಕಾಗುತ್ತದೆ. ಇದು ಮಾನಸಿಕವಾಗಿ ಹಲವಾರು ಸಮಸ್ಯೆಗಳನ್ನು ಸೃಜಿಸುತ್ತಿರುವುದು ಗಮನಕ್ಕೆ ಬಂದಿರುತ್ತದೆ. ಏಕೆಂದರೆ ಉಳಿದ ಮಕ್ಕಳೆಲ್ಲಾ ದಿನವಿಡೀ ಒಂದೆಡೆ ಸೇರಿ ಒಟ್ಟುಗೂಡಿ ಆಟವಾಡುವುದು ಮತ್ತಿತರೆ ಚಟುವಟಿಕೆಗಳಲ್ಲಿ ಕೂಡಿರುವುದನ್ನು ಈ ಕ್ವಾರಂಟೈನ್‌ನಲ್ಲಿರುವ ಮಗು ಗಮನಿಸಿದಾಗ ಆ ಮಗುವು ಮಾನಸಿಕವಾಗಿ ಹಲವಾರು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ.
2) ಅಲ್ಲದೇ ಪ್ರಸ್ತುತ ಇರುವ ಮಕ್ಕಳ ಪಾಲನಾ ಸಂಸ್ಥೆಯಲ್ಲಿಯೇ ಒಂದು ಕೊಠಡಿಯನ್ನು ಕ್ವಾರಂಟೈನ್‌ಗೆ ಮೀಸಲಿಡಿಸಿದ್ದಾಗ್ಯೂ ಹೊಸದಾಗಿ ಹೊರಗಿನಿಂದ ಮಗು ಮಕ್ಕಳ ಪಾಲನಾ ಸಂಸ್ಥೆಯ ಕ್ಯಾಂಪಸ್‌ಗೆ ಪ್ರವೇಶಿಸುವುದರಿಂದ ಇದು ಕೋವಿಡ್-19 ಹಿನ್ನೆಲೆಯಲ್ಲಿ ಸಂಪೂರ್ಣ ಸುರಕ್ಷತೆಯನ್ನು ಒದಗಿಸಿದಂತಾಗುವುದಿಲ್ಲ.

REDMI NOTE 8
AI QUAD CAMERA

ಮೇಲಿನ ಎಲ್ಲಾ ಕಾರಣಗಳಿಂದ ಹೊಸದಾಗಿ ದಾಖಲಾದ ಮಕ್ಕಳನ್ನು ಸಂಪೂರ್ಣವಾಗಿ ಬೇರೆ ಕ್ಯಾಂಪಸ್‌ನಲ್ಲಿ ಮಾತ್ರ ವ್ಯವಸ್ಥೆ ಕಲ್ಪಿಸುವುದು ಸೂಕ್ತವೆಂದು ಭಾವಿಸಲಾಗಿದೆ. ಆದ್ದರಿಂದ ಭವಿಷ್ಯದಲ್ಲಿ ಅಥವಾ ಈ ಪತ್ರದ ದಿನಾಂಕದಿಂದ ಈ ರೀತಿಯ ವ್ಯವಸ್ಥೆ ಮಾಡಿಕೊಳ್ಳಲು ಸೂಚಿಸಲಾಗಿದೆ.

1) ಜಿಲ್ಲೆಯಲ್ಲಿ ಕೋವಿಡ್-19 ಹಿನ್ನೆಲೆಯಲ್ಲಿ ಬಹುತೇಕ ಮಕ್ಕಳನ್ನು ಪೋಷಕರ ವಶಕ್ಕೆ ನೀಡಲಾಗಿರುವ ಹಿನ್ನೆಲೆಯಲ್ಲಿ ಯಾವುದಾದರೂ ಸಮಗ್ರ ಮಕ್ಕಳ ರಕ್ಷಣಾ ಯೋಜನೆ ಇಲಾಖೆಗೆ ಸಂಬಂಧಪಟ್ಟ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಮಕ್ಕಳಿಲ್ಲದೇ ಖಾಲಿ ಇದ್ದಲ್ಲಿ ಅಥವಾ 1, 2 ಮಕ್ಕಳಿದ್ದಲ್ಲಿ ಅಂತಹ ಮಕ್ಕಳ ಪಾಲನ ಸಂಸ್ಥೆಗಳನ್ನು ಫಿಟ್ ಫೆಸಿಲಿಟಿ ಎಂದು ಪರಿಗಣಿಸಿ ಹೊಸ ದಾಖಲಾತಿ ಮಕ್ಕಳನ್ನು ಅಲ್ಲಿ ವಾಸ್ತವ್ಯವಿರಿಸಬಹುದು. **ಈ ಆಪ್ಷನ್‌ಗೆ ಪ್ರಥಮ ಆದ್ಯತೆಯನ್ನು ನೀಡುವುದು.**

2) ನಮ್ಮ ಇಲಾಖೆಯ ಯಾವುದೇ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಖಾಲಿ ಇಲ್ಲದ ಸಂದರ್ಭದಲ್ಲಿ ಜಿಲ್ಲೆಯಲ್ಲಿರುವ ಯಾವುದಾದರೊಂದು ಸಮಾಜ ಕಲ್ಯಾಣ ಇಲಾಖೆ/ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ/ಕಿತ್ತೂರು ರಾಣಿ ಚೆನ್ನಮ್ಮ/ಮೊರಾರ್ಜಿ ದೇಸಾಯಿ ವಸತಿ ಗೃಹ ಇಂತಹ ಸರ್ಕಾರಿ ಸ್ವಾಮ್ಯದ ವಸತಿಗೃಹಗಳ ಸೌಕರ್ಯವಿರುವ ಕಡೆ ಪ್ರಸ್ತುತ ಮಕ್ಕಳು ಯಾರೂ ಇಲ್ಲದೇ ಖಾಲಿ ಇರುವುದರಿಂದ ಆ ವಸತಿಗೃಹಗಳನ್ನೇ ಬಾಲಕಿಯರ ಮತ್ತು ಬಾಲಕರ ಪ್ರತ್ಯೇಕ ಫಿಟ್ ಫೆಸಿಲಿಟಿಗಳನ್ನಾಗಿ ಮಕ್ಕಳ ಕಲ್ಯಾಣ ಸಮಿತಿಯ ಮೂಲಕ ಗುರುತಿಸಿ ತಾತ್ಕಾಲಿಕವಾಗಿ ಪರಿವರ್ತಿಸಿ ಹೊಸದಾಗಿ ರೆಸ್ಕ್ಯೂ ಮಾಡಲಾದ ಮಕ್ಕಳನ್ನು ಇಂತಹ ಫಿಟ್ ಫೆಸಿಲಿಟಿಗಳಲ್ಲಿ ಪಾಲನೆ ಮತ್ತು ರಕ್ಷಣೆ ನೀಡುವುದು ಸೂಕ್ತ. ಇದರ ಸಲುವಾಗಿ ಸದರಿ ವಸತಿಗೃಹದ ಕರ್ತವ್ಯ ನಿರತ ಸಿಬ್ಬಂದಿಯಿಂದಲೇ ಈ ಮಕ್ಕಳನ್ನು ನೋಡಿಕೊಳ್ಳುವ ವ್ಯವಸ್ಥೆಯನ್ನು ಕಲ್ಪಿಸಬಹುದು.

3) ಮೇಲೆ ತಿಳಿಸಿದಂತೆ ಐಸಿಪಿಎಸ್ ಇಲಾಖೆಯ ಹೊರತು ಬೇರೆ ಇಲಾಖೆಯ ವಸತಿಗೃಹಗಳನ್ನು ತಾತ್ಕಾಲಿಕವಾಗಿ ಫಿಟ್ ಫೆಸಿಲಿಟಿಗಳೆಂದು ಬಳಸಿಕೊಳ್ಳುವ ಸಂದರ್ಭದಲ್ಲಿ ಹಾಲಿ ಸದರಿ ವಸತಿಗೃಹದ ಕರ್ತವ್ಯ ನಿರತ ಸಿಬ್ಬಂದಿಗಳಿಗೆ ಸಮಗ್ರ ಮಕ್ಕಳ ರಕ್ಷಣಾ ಯೋಜನೆ ಬಗ್ಗೆ ಒಂದು ಓರಿಯಂಟೇಷನ್ ತರಬೇತಿಯನ್ನು ಕೊಡಬೇಕಾಗುತ್ತದೆ.

4) ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಹೀಗೆ ಗುರಿತಿಸಲ್ಪಟ್ಟ ಫಿಟ್ ಫೆಸಿಲಿಟಿಗಳಲ್ಲಿ ದಾಖಲಾದ ಮಕ್ಕಳಿಗೆ ಈಗಾಗಲೇ ಇಲಾಖಾ ವತಿಯಿಂದ ನಡೆಯುತ್ತಿರುವ ಮಕ್ಕಳ ಪಾಲನ ಸಂಸ್ಥೆಗಳಲ್ಲಿರುವ ಮಕ್ಕಳಿಗೆ ಯಾವ ಚಟುವಟಿಕೆಗಳನ್ನು ನಿರ್ವಹಿಸಲಾಗುತ್ತಿದೆಯೇ ಅವೆಲ್ಲವನ್ನೂ ಈ ಮಕ್ಕಳಿಗೂ ಸಹ ದೊರಕುವಂತೆ ವ್ಯವಸ್ಥೆ ಕಲ್ಪಿಸುವುದರ ಜೊತೆಗೆ ಒಬ್ಬ ಕೌನ್ಸಿಲರ್ ಸೇವೆಯನ್ನೂ ಒದಗಿಸಲು ಪ್ರತ್ಯೇಕ ವ್ಯವಸ್ಥೆ ಮಾಡಬೇಕು.

5) ಈ ಪರ್ಯಾಯ ವ್ಯವಸ್ಥೆಯು ಕೋವಿಡ್-19 ಸಹಜ ಸ್ಥಿತಿಗೆ ಬರುವವರೆಗೆ ಅಥವಾ ಮಕ್ಕಳು ಶಾಲೆಗೆ ಮರಳಿ ಬರುವವರೆಗೆ, ಯಾವುದು ಮೊದಲೋ ಅದು ಅನ್ವಯವಾಗುವುದು.

6) ಮೇಲಿನಂತೆ ಹೊಸದಾಗಿ ದಾಖಲಾದ ಮಕ್ಕಳಿಗಾಗಿ ಆಯ್ಕೆ ಮಾಡಲಾದ(ಬಾಲಕರು ಮತ್ತು ಬಾಲಕಿಯರು ಪ್ರತ್ಯೇಕವಾಗಿ) ಫಿಟ್ ಫೆಸಿಲಿಟಿಗಳ ಸಿಬ್ಬಂದಿ ವೇತನಕ್ಕಾಗಿ ಸಮಗ್ರ ಮಕ್ಕಳ ರಕ್ಷಣಾ ಯೋಜನೆಯಿಂದ ಯಾವುದೇ ಅನುದಾನವನ್ನು ಒದಗಿಸಲು ಬರುವುದಿಲ್ಲ. ಕೇವಲ ಮಕ್ಕಳ ಊಟೋಪಚಾರದ ವೆಚ್ಚವನ್ನು ಮಾತ್ರ ಐಸಿಪಿಎಸ್ ಯೋಜನೆಯ ವತಿಯಿಂದ ಭರಿಸಬಹುದಾಗಿದೆ. ಯೋಜನೆಯ ಮಾರ್ಗದರ್ಶನಗಳ ಪ್ರಕಾರ ಒಂದು ಮಗುವಿಗೆ ಒಂದು ತಿಂಗಳಿಗೆ ಊಟೋಪಚಾರಕ್ಕಾಗಿ ರೂ.1500/-ಗಳ ವೆಚ್ಚವನ್ನು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಸಾದಿಲ್ವಾರು ವೆಚ್ಚದ ಅಡಿಯಲ್ಲಿ ಪ್ರಚಲಿತದಲ್ಲಿರುವ ನಿಯಮಾನುಸಾರ ಭರಿಸಬಹುದಾಗಿದೆ.

REDMI NOTE 8

ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಈಗಾಗಲೇ ಇರುವ ಮಕ್ಕಳ ಆರೋಗ್ಯದ ಹಿತದೃಷ್ಟಿಯಿಂದ ಈ ರೀತಿ ಪ್ರತ್ಯೇಕವಾಗಿ ಜಿಲ್ಲಾ ಮಟ್ಟದಲ್ಲಿ ಯಾವುದಾದರೊಂದು ಲಭ್ಯವಿರುವ ವ್ಯವಸ್ಥೆಯನ್ನು ಫಿಟ್ ಫೆಸಿಲಿಟಿಯನ್ನಾಗಿ ಮಾಡಿಕೊಂಡು ಹೊಸ ದಾಖಲಾತಿಯನ್ನು ಇಲ್ಲೇ ನಿರ್ವಹಿಸಬಹುದಾಗಿದೆ.

ಆದ್ದರಿಂದ ಹೊಸದಾಗಿ ದಾಖಲಾದ ಎಲ್ಲಾ ಮಕ್ಕಳಿಗೆ ಪಾಲನೆ ಮತ್ತು ರಕ್ಷಣೆ ಒದಗಿಸಲು ಜಿಲ್ಲಾಡಳಿತದೊಂದಿಗೆ ಸಂಪರ್ಕಿಸಿ ಈ ರೀತಿ ಬಾಲಕಿಯರ ಮತ್ತು ಬಾಲಕರಿಗೆ ಪ್ರತ್ಯೇಕ ವ್ಯವಸ್ಥೆ ಮಾಡಿಕೊಂಡಿರುವ ವ್ಯವಸ್ಥೆಯ ಬಗ್ಗೆ ಕೇಂದ್ರ ಕಛೇರಿಗೆ ಅನುಪಾಲನಾ ವರದಿಯನ್ನು 3 ದಿನಗಳೊಳಗೆ ಲಗತ್ತಿಸಿದ ನಮೂನೆಯಲ್ಲಿ ಒದಗಿಸಲು ಸೂಚಿಸಿದೆ.

ಕು. ಯಲ್ಲವ್ವ, ಸಂಶೋಧನಾಧಿಕಾರಿ, ಕೇಂದ್ರ ಕಛೇರಿ ಇವರು ಈ ಬಗ್ಗೆ ಎಲ್ಲಾ ಜಿಲ್ಲೆಗಳೊಂದಿಗೆ ಫಾಲೋಅಪ್ ಮಾಡಿ ಮೇಲಿನ ಅಗತ್ಯ ವ್ಯವಸ್ಥೆಗಳನ್ನು ಮಾಡಿಕೊಂಡಿರುವ ಬಗ್ಗೆ 30 ಜಿಲ್ಲೆಗಳ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳೊಂದಿಗೆ ಖಚಿತಪಡಿಸಿಕೊಳ್ಳತಕ್ಕದ್ದು ಹಾಗು ಈ ಬಗ್ಗೆ ಲಗತ್ತಿಸಿದ ನಮೂನೆಯಂತೆ ಮಾಹಿತಿಯನ್ನು ಕ್ರೋಢೀಕರಿಸಿ ನಿರ್ದೇಶಕರಿಗೆ ಸಲ್ಲಿಸತಕ್ಕದ್ದು.

ತಮ್ಮ ವಿಶ್ವಾಸಿ,
Pali 25.04.2020
ನಿರ್ದೇಶಕರು,
ಸಮಗ್ರ ಮಕ್ಕಳ ರಕ್ಷಣಾ ಯೋಜನೆ,
ಬೆಂಗಳೂರು.

## Arrangements for New Admissions in the COVID-19 situation

| Sl.No. | District Name | Name of the Institution Identified for New Admission of Boys | Name of the Institution Identified for New Admission of Girls | Remarks |
|---|---|---|---|---|